

# ರವಿಕೆಗೆ ಕುಚ್ಚು ಮಹಿಳೆಯ ಮೆಚ್ಚು

**ಕುಚ್ಚು ಇಲ್ಲದ ರೇಷ್ಮೆ ಸೀರೆ ಈಗ ಕಾಣಸಿಗುವುದೇ ಅಪರೂಪ. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ರವಿಕೆಗಳಿಗೂ ಥರಾವರಿ ಕುಚ್ಚು ಹಾಕಿಸಿಕೊಳ್ಳುವ ಟ್ರೆಂಡ್ ಜನಪ್ರಿಯವಾಗಿದೆ.**

■ ಪದ್ಮಿನಿ ನಾಗರಾಜು

ಸೀರೆಯ ತುದಿಗೆ ಕಟ್ಟುವ ಕುಚ್ಚು ಸೀರೆಯ ಅಂದವನ್ನು ಹೆಚ್ಚಿಸುತ್ತಿದೆ. ಹೆಂಗಳೆಯರ ಗಮನ ಅತ್ತ ಹರಿಯುತ್ತಿದೆ. ಇದು ಸೀರೆಯ ಮಾತಾಯಿತು. ಈಗಿನ ಟ್ರೆಂಡ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ಸೀರೆ ಜೊತೆ ಧರಿಸುವ ರವಿಕೆಗಳಿಗೂ ಕುಚ್ಚು ಹಾಕಿಸಿಕೊಳ್ಳುವ ಫ್ಯಾಷನ್ ಮುನ್ನೆಲೆಗೆ ಬಂದಿದೆ. ಥರಾವರಿ ವಿನ್ಯಾಸಗಳ ರವಿಕೆ ಕುಚ್ಚುಗಳಿಗೆ ಮಹಿಳೆಯರು ಮನಸೋತಿದ್ದಾರೆ. ಈಗೀಗ ಹೊಸಹೊಸ ರೀತಿಯ ಕುಚ್ಚುಗಳು ಬಂದಿವೆ. ಅದರಲ್ಲಿ ಕ್ರೋಶದಿಂದ ಹಾಕುವ ಕುಚ್ಚುಗಳು ಬಹಳ ಜನಪ್ರಿಯ.

ಅಂದ ಹಾಗೆ, ನಾನಂದು 4–5 ಸೀರೆಗಳಿಗೆ ಜಿಗ್‌ಜಾಗ್ ಫಾಲ್ ಹಾಕಿಸಲು ನನ್ನ ಮಾಮೂಲಿ ಟೈಲರ್ ಉಮೇಶ್ ಬಳಿ ಹೋದೆ. ಅದು ಮಧ್ಯಾಹ್ನದ ಊಟದ ಸಮಯ. ಅಲ್ಲಿದ್ದ 4–5 ಜನ ಸಿಂಪಿಗರು ಊಟಕ್ಕೆ ಹೋಗಿದ್ದರೂ ಹೊಲಿಗೆ ಮಿಷಿನ್ ಮೇಲೆ ಕುಳಿತಿದ್ದ ರಂಗಸ್ವಾಮಿ ನಾಲ್ಕೈದು ಚೂರು ಬಟ್ಟೆಗಳನ್ನು ಯಾವ ಯಾವುದೋ ಆಕೃತಿಗೆ ಕತ್ತರಿಸಿ ಕೂಡಿಸಿ ಕುಚ್ಚುಗಳನ್ನು ತಯಾರಿಸುತ್ತಿದ್ದರು. ನಾನು ಕುತೂಹಲಕ್ಕೆ 'ರೆಡಿಮೇಡ್ ಕುಚ್ಚುಗಳೇ ಸಿಗುವಾಗ ಇದೇಕೆ ಹೊಲಿತಿದ್ದೀರಿ' ಎಂದು ಪ್ರಶ್ನಿಸಿದೆ. ಅದಕ್ಕೆ ಅವರು 'ಮೇಡಂ, ಮೊದಲು ಹೀಗೆ ಬಟ್ಟೆಯಲ್ಲಿ ಹೊಲಿದ ಕುಚ್ಚುಗಳ ಫ್ಯಾಷನ್ ಇತ್ತು. ಆಮೇಲೆ ರೆಡಿಮೇಡ್ ಬಂದವು, ಈಗ ಮತ್ತೆ ಬಟ್ಟೆಯಲ್ಲಿ ಹೊಲಿದ ಕುಚ್ಚುಗಳದ್ದೇ ಭರಾಟೆ. ಅದಕ್ಕೆ ತಲೆಕೆಡಿಸಿಕೊಂಡು ಏನೇನು ಸಾಧ್ಯ ಅಂತ ಯೋಚಿಸಿ ಕುಚ್ಚುಗಳನ್ನು ಹೊಲಿತಿದ್ದೀನಿ' ಎಂದರು.

ಶ್ರೀರಂಗಪಟ್ಟಣದ ಬಳಿಯ ಕಡತನಾಳು ಗ್ರಾಮದಲ್ಲಿ ಪುಟ್ಟ ಬಾಲಕನಾಗಿದ್ದಾಗಿನಿಂದಲೇ ಕಾಜಾ ಬಟನ್ ಹಾಕುವುದನ್ನು ಕಲಿತು ಬೆಂಗಳೂರಿಗೆ ಬಂದು 35 ವರ್ಷಗಳಿಂದ ಟೈಲರಿಂಗ್ ಕೆಲಸ ಮಾಡುತ್ತಿರುವ ರಂಗಸ್ವಾಮಿಯವರು ಯಾವ ಫ್ಯಾಷನ್ ಡಿಸೈನರ್‌ಗಿಂತಲೂ ಕಡಿಮೆಯಿಲ್ಲ. ಅವರು ಮಾಡುವ ಒಂದೊಂದು ಕುಚ್ಚಿನ ಮಾದರಿಗಳು ಇಂದು ಅನೇಕ ಗ್ರಾಹಕರನ್ನು ಸೆಳೆಯುತ್ತಿವೆ. ಅವರ ಪ್ರಕಾರ ದರ್ಜಿಗೆ ಮುಖ್ಯವಾಗಿ ಬೇಕಾದದ್ದು ತಾಳ್ಮೆ, ಗ್ರಾಹಕರ ಮನಸ್ಸಿಗೆ ತಕ್ಕಂತಹ ಹೊಲಿಗೆ, ಅವರ ಸಂತೃಪ್ತಿಯ ನಗೆಯೇ ನಮಗೆ ಬಹುಮಾನ ಎನ್ನುತ್ತಾರೆ. ಇಂತಹ ಶ್ರಮಜೀವಿಗಳು ಯಾವ ಫ್ಯಾಷನ್ ಡಿಸೈನರ್‌ಗಳಿಗಿಂತ ಕಡಿಮೆಯಿರುವುದಿಲ್ಲ. ಎಲೆಮರೆಯಕಾಯಿಯಂತೆ ಇದ್ದು ತಾವು ಹೊಲಿದ ರವಿಕೆಯೊಂದಿಗೆ ಸೀರೆಯುಟ್ಟ ನಾರಿಯರ ಖುಷಿಯನ್ನು ಕಣ್ಣು ತುಂಬಿಕೊಳ್ಳುತ್ತಾರಷ್ಟೆ.

ಇಂದು ಮಾರುಕಟ್ಟೆಯಲ್ಲಿ ರೆಡಿಮೇಡ್ ಬ್ಲೌಸ್‌ಗಳು ಎಲ್ಲೆಂದರಲ್ಲಿ ಸಿಗುತ್ತಿವೆ. ಅವು ತಕ್ಷಣಕ್ಕೆ ಸಿಗುವ